ಶ್ರೀ ಮಹದೇವ್ ಜಿ. ಬಣಕಾರ್.—ಯಾವ ತಾರೀಖಿನಿಂದ ಇದನ್ನು ಅನ್ವಯಿಸಲಾಗಿದೆ ಎಂದು ಕೇಳಿದುದಕ್ಕೆ ಉತ್ತರದಲ್ಲಿ ತಾರೀಕು 1-4-1963 ಎಂದು ತಿಳಿಸಲಾಗಿದೆ. ಅದಕ್ಕೂ ಪೂರ್ವದಲ್ಲಿ ಅವರಿಗೆ ಇವನ್ನು ಏಕ ಅನ್ವಯ ಮಾಡಲಿಲ್ಲ ಮತ್ತು ಇದೇ ಸಂಬಂಧದಲ್ಲಿ 1967ರಲ್ಲಿ ಒಂದು ಬೇರೆ ಆದೇಶವನ್ನು ಹೊರಡಿಸಲಾಗಿತ್ತು ಎಂದು ಕೇಳುತ್ತೇನೆ, ಇದು ಹೌದೇ ?

ಶ್ರೀ ಕೆ. ಎ. ಶಂಕರಗೌಡ.—ಮೊದಲು 1963 ರಲ್ಲಿ ಹೊರಡಿಸಿದಾಗ ಬೊಂಬಾಯಿ ಕರ್ನಾಟಕದಿಂದ ಬಂದಿದ್ದವರಿಗೆ ಆ ಬೊಂಬಾಯಿ ಆಕ್ಟಿನ ಪ್ರಕಾರ ಇದು ಅವರಿಗೆ ಅನ್ವಯ ಆಗುತ್ತದೋ ಇಲ್ಲವೋ ಎಂಬ ಅನುಮಾನ ಉಂಟಾಗಿ ಆ ಆಕ್ಟನ್ನು ತರಿಸಿ ಪರಿಶೀಲನೆ ಮಾಡಿ ಅದಕ್ಕೆ ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡಿದ್ದಾಯಿತು. ಈಗ ಅವರಿಗೂ ಅದು ಅನ್ವಯವಾಗುವ ಹಾಗೆ ಮಾಡಲಾಗಿದೆ.

Mr. DEPUTY SPEAKER.—Now, Short notice question number (1)

SHORT NOTICE QUESTION AND ANSWER

Death of a person in Sadhana Lodge in Belgaum

1. Sri B. B. SAYANAK (Belgaum).—

Will the Chief Minister be pleased to state :—

(*a*) whether they are aware that one Sri Gurusiddappa Setappa Gadavi was found dead in Room No. 10 in Sadhana Lodge, Kirloskar Road in Belgaum on 16th August 1968;

(*b*) if so, the cause of death ;

(*c*) whether the death is a suspicious one ;

(*d*) whether the Police have arrested any person in this connection ;

(*e*) if so, how many ?

A.—Sri VEERENDRA PATIL (Chief Minister).—

(*a*) Yes.
(*b*) The investigation is proceeding.
(*c*) Does not arise at this stage.
(*d*) No.
(*e*) Does not arise.

Sri B. B. SAYANAK.—May I know whether this death is due to murder or suicide ?

† Sri VEERENDRA PATIL.—Investigation is still going on. It is very difficult to say whether it is suicide or heart failure or murder because post mortem has been done and the medical officer has reserved his opinion pending examination of the Viscera by the Chemical Examinor, Bangalore. He has not yet reported.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ಸಂದರ್ಭದಲ್ಲಿ ಯಾರನ್ನಾದರೂ ಅರೆಸ್ಟ್ ಮಾಡಲಾಗಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ.

Sri B. B. SAYANAK.—Is it not a fact that this offence took place in the heart of the City ?

Sri VEERENDRA PATIL.—I have not accepted that an offence has taken place. Nobody knows the cause of the death. There have been no injuries on the body of the deceased. So post mortem has been done and the contents of the stomach have been sent to the Chemical Examiner. He has not yet received the report. The doctor also has reserved his report. In the circumstances it is very difficult to accept that an offence was committed or that the gentleman was murdered.

Sri D. B. KALMANKAR.—At what stage is the investigation now ?

Sri VEERENDRA PATIL.—I said that the medical officer has reserved his opinion because the Viscera with the contents of the stomach after the post mortem has been sent to the Chemical Examiner and his report is awaited.

Mr. DEPUTY SPEAKER.—Question time is over.

Sri M. NAGAPPA (Raichur).—Sir, I had sent notice of an adjournment motion.

Mr. DEPUTY SPEAKER.—I have received it. I will take it up tomorrow.

STATEMENT BY CHIEF MINISTER *re*: THE VISIT OF SUB-COMMITTEE OF PARLIAMENT IN CONNECTION WITH HOLDING OF THE SESSION OF PARLIAMENT AT BANGALORE

ಶ್ರೀ ಪಾಟೀಳ್ ನಾಗರಾಜ್ (ಚಿಕ್ಕಪೇಟೆ).—ಈ ಹಿಂದೆ ದಕ್ಷಿಣಭಾರತ ರಾಜ್ಯ ಒಂದರಲ್ಲಿ ಪಾರ್ಲಿಮೆಂಟಿನ ಒಂದು ಅಧಿವೇಶನವನ್ನು ನಡೆಸುವಕ್ಕ ಬಗ್ಗೆ ಸಾಧ್ಯತೆ ಇದೆಯೇ ಎಂಬ ವಿಚಾರವನ್ನು ಮಾಡಲು ಪಾರ್ಲಿಯಮೆಂಟಿನ ಒಂದು ಸಬ್‌ಕಮಿಟಿ ಬೆಂಗಳೂರಿಗೆ ಬಂದಿದ್ದಾಗ್ಗೆ ಆ ಸದಸ್ಯರನ್ನು ಇಲ್ಲಿ ಸರಿಯಾದ ರೀತಿಯಲ್ಲಿ ಕಾಣದೆ ಅನಡ್ಡೆ ಮಾಡಿದ್ದರಿಂದ ಇಲ್ಲಿ ಆ ಪಾರ್ಲಿಯಮೆಂಟ್ ಅಧಿವೇಶನ ಮಾಡುವುದಕ್ಕೆ ಅವಕಾಶವಿಲ್ಲ ಎಂಬ ಒಂದು ಹೇಳಿಕೆ ಹೊರಟಿತ್ತು. ಆ ಸಂಬಂಧದಲ್ಲಿ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಇಲ್ಲಿಗೆ ಪಾರ್ಲಿಮೆಂಟಿನ ಒಂದು ಸಬ್-ಕಮಿಟಿಯವರು ಇಲ್ಲಿ ಪಾರ್ಲಿಮೆಂಟ್ ಅಧಿವೇಶನ ನಡೆಸುವುದಕ್ಕೆ ಅಗತ್ಯವಾದ ಎಲ್ಲಾ ಅನುಕೂಲಗಳೂ ಇವೆಯೇ ಎಂಬುದನ್ನು ಪರಿಶೀಲಿಸುವುದಕ್ಕಾಗಿ ಬಂದಿದ್ದಾಗ ಆ ಸದಸ್ಯರಿಗೆ ಇಲ್ಲಿ ಎಲ್ಲ ಅನುಕೂಲತೆಗಳನ್ನೂ ಕೊಟ್ಟಿದ್ದಾರೆ. ಆದರೆ ಎಲ್ಲಾ ಪಾರ್ಲಿಯಮೆಂಟಿನ ಸದಸ್ಯರನ್ನೂ ಸ್ಪೇಟ್ ಗೆಸ್ಟ್‌ಗಳಾಗಿ ಟ್ರೀಟ್ ಮಾಡಲು ಸಾಧ್ಯವಿರಲಿಲ್ಲ. ಕೆಲವರನ್ನುಮಾತ್ರ ಸ್ಪೇಟ್‌ಗೆಸ್ಟ್‌ಗಳಾಗಿ ಟ್ರೀಟ್‌ಮಾಡಲಾಯಿತು. ಇನ್ನುಳಿದವರಿಗೂ ಕೂಡ ಎಲ್ಲಾ ಸೌಕರ್ಯಗಳನ್ನು ಅಂದರೆ ಊಟ, ವಸತಿ ಸೌಕರ್ಯಗಳನ್ನು ಒದಗಿಸಲಾಗಿತ್ತು. ಆದರೆ ಪ್ರಯಾಣಕ್ಕೆ ವಾಹನ ಸೌಕರ್ಯವನ್ನು ಒದಗಿಸತಕ್ಕ ವಿಚಾರದಲ್ಲಿ ಸ್ವಲ್ಪ ಅನಾನುಕೂಲವಾಯಿತು ; ಅಷ್ಟಕ್ಕಾಗೇ ಯಾರೋ ಒಬ್ಬಿಬ್ಬ ಸದಸ್ಯರು ಪ್ರೆಸ್ಸಿನವರಲ್ಲಿ ಹೋಗಿ ಆ ವಾಹನ ಸೌಕರ್ಯಕ್ಕೆ ತೊಂದರೆಯಾದ್ದನ್ನೇ ದೊಡ್ಡದು ಮಾಡಿ ಹೇಳಿದ್ದಾರೆ. ಆದರೆ ಆ ವಿಚಾರ ನನ್ನ ಗಮನಕ್ಕೆ ಬಂದಕೂಡಲೆ ನಾನು ನನ್ನ ವಿಷಾದವನ್ನು ಸೂಚಿಸಿದ್ದೇನೆ. ಹಾಗೂ ಆ ಬಗ್ಗೆ ಎನೇನು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲಾ ಕೈಗೊಳ್ಳಲಾಗಿದೆ.